# ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

## ಎಮ್ ವಿ ಸಿ ನಂಬರಃ 778/2021

ಆರ್ ಡಬ್ಲ್ಯೂ-1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಡಾ ಶೇಖ ಮಯುನಿದ್ದೀನ್ |
| **ತಂದೆ/ಗಂಡನ ಹೆಸರು** | : | ಎ ಎಮ್ ಜಲಾಲ್ |
| **ವಯಸ್ಸು** | : | 36 ವರ್ಷ |
| **ಉದ್ಯೋಗ** | : | ಮೆಡಿಕಲ್ ಆಪಿಸರ್ ಮೆಗ್ಗಾನ ಆಸ್ಪತ್ರೆ ಶಿವಮೊಗ್ಗ |
| **ವಾಸ** | : | ಶಿವಮೊಗ್ಗ |

**ದಿನಾಂಕಃ 07-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎನ್ ಡಿ ವಕೀಲರಿಂದಃ**

ನ್ಯಾಯಾಲಯದ ಸಮನ್ಸ ಮೇರೆಗೆ ನಾನು ಅರ್ಜಿದಾರರಿಗೆ ಸಂಬಂದಪಟ್ಟ ಮೂಲ ಎಮ್ ಎಲ್ ಸಿ, ಕೇಸ್ ಶೀಟ್ ಹಾಗೂ ಎಕ್ಸರೆಯನ್ನು ಹಾಜರುಪಡಿಸಿರುತ್ತೇನೆ.

ಮೂಲ ಎಮ್ ಎಲ್ ಸಿ ರಿಜಿಸ್ಟರ್ ಹಾಗೂ ದೃಡೀಕೃತ ಎಮ್ ಎಲ್ ಸಿ ನಕಲನ್ನು ಹಾಜರುಪಡಿಸುತ್ತಿದ್ದೇನೆ. ಸದರಿ ಮೂಲ ರಿಜಿಸ್ಟರು ದಿನನಿತ್ಯದ ಬಳಕೆಗೆ ಬೇಕಾಗಿರುವುದರಿಂದ ಅದನ್ನು ಸಾಕ್ಷಿಗೆ ವಾಪಸ್ಸು ಮಾಡಿ ಅದರ ದೃಡೀಕೃತ ನಕಲು ಸರಿಯಾಗಿರುವುದರಿಂದ ಅರ್ಜಿದಾರರಿಗೆ ಸಂಬಂದಪಟ್ಟ ಎಮ್ ಎಲ್ ಸಿ ಎಕ್ಸಟ್ರಾಕ್ಟನ ದೃಡೀಕೃತ ನಕಲನ್ನು ನಿ ಆರ್ -1 ಎಂದು ಗುರುತಿಸಲಾಯಿತು.

ಅರ್ಜಿದಾರರಿಗೆ ಸಂಬಂದಪಟ್ಟ ಕೇಸ್ ಶೀಟ್ ನ್ನು ನಿ ಆರ್ -2 ಎಂದು, 2 ಎಕ್ಸರೆಗಳನ್ನು ಹಾಜರುಪಡಿಸಿದ್ದು ಒಂದು ಎಕ್ಸರೆಯನ್ನು ತಕರಾರಿಗೆ ಒಳಪಟ್ಟು ನಿ ಆರ್ -3 ಎಂದು ಗುರುತಿಸಲಾಯಿತು.

ಅರ್ಜಿದಾರರು ದಿನಾಂಕ 26.08.2020 ರಂದು ರಾತ್ರಿ 10.45 ಗಂಟೆಗೆ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಸದರಿಯವರಿಗೆ ಪ್ರಥಮ ಚಿಕಿತ್ಸೆ ಮಾಡಿರುತ್ತೇವೆ. ಸದರಿಯವರಿಗೆ ಎಕ್ಸರೆ ಮಾಡಿಸಿ ಮುಂದುವರೆದ ಚಿಕಿತ್ಸೆಗಾಗಿ ಎಲುಬು ಮೂಳೆ ತಜ್ಞರಿಗೆ ರೆಪರ್ ಮಾಡಿರುತ್ತೇವೆ. ಸದರಿ ಅರ್ಜಿದಾರರ ಜೊತೆ ರಘು ರವರು ಬಂದಿರುತ್ತಾರೆ. ಕರೆದುಕೊಂಡು ಬಂದ ವ್ಯಕ್ತಿಯ ಸಹಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳುತ್ತೇವೆ ಸರಿ ಅವರ ಸಹಿಯನ್ನು ಎಮ್ ಎಲ್ ಸಿ ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡಿದ ವೈದ್ಯರೇ ಗಾಯದ ಪ್ರಮಾಣ ಪತ್ರವನ್ನು ನೀಡಬೇಕು ಎಂದರೆ ಸರಿ. ಅರ್ಜಿದಾರರಿಗೆ ನಾನೇ

ಸಂಪ್ರಾದಾಯಿಕ ಚಿಕಿತ್ಸೆ ಕೊಟ್ಟಿರುತ್ತೇನೆ. ನಾನು ಸದರಿಯವರಿಗೆ ಚಿಕಿತ್ಸೆ ಕೊಟ್ಟ ಬಗ್ಗೆ ಕೇಸ್ ಶೀಟ್ ನಲ್ಲಿ ಸಹಿ ಹಾಕಿರುತ್ತೇನೆ. ನಾನೇ ಅರ್ಜಿದಾರರಿಗೆ ಸಂಪೂರ್ಣವಾಗಿ ಚಿಕಿತ್ಸೆ ಕೊಟ್ಟಿರುತ್ತೇನೆ ಎಂದರೆ ಸರಿ. ಸಂಪೂರ್ಣ ಚಿಕಿತ್ಸೆ ನೀಡಿದ ವೈದ್ಯರೇ ಡಿಸ್ಚಾರ್ಜ ಸಮ್ಮರಿ ಕೊಡುತ್ತಾರೆ ಎಂದರೆ ಸರಿ. ನಮ್ಮ ಆಸ್ಪತ್ರೆಯಲ್ಲಿ ಡಿಜಿಟಲ್ ಎಕ್ಸರ್ ಇದೆ ಎಂದರೆ ಸರಿ. ಸದರಿ ಡಿಜಿಟಲ್ ಎಕ್ಸರೆ ತೆಗೆದ ಬಗ್ಗೆ ರಿಜಿಸ್ಟರ್ ನ್ನು ನಿರ್ವಹಣೆ ಮಾಡುತ್ತಾರೆ ಎಂದರೆ ಸಿಸ್ಟಮ್ ನಲ್ಲಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಡಿಜಿಟಲ್ ಎಕ್ಸರೆಯನ್ನು ಹೊರಗಡೆ ಕೊಡಲು ಬರುವುದಿಲ್ಲ ಎಂದರೆ ನಿಜ. ನಮ್ಮ ಆಸ್ಪತ್ರೆಯಲ್ಲಿ ಡಿಜಿಟಲ್ ಎಕ್ಸರೆ 2021 ರಿಂದ ಬಂದಿರುತ್ತದೆ. ಡಿಜಿಟಲ್ ಎಕ್ಸರೆ ಇದ್ದರೆ ನಿ ಆರ್ -3 ರಂತೆ ಕೊಡಲು ಬರುವುದಿಲ್ಲ ಎಂದರೆ ಸರಿ. ಸದರಿ ಡಿಜಿಟಲ್ ಎಕ್ಸರೆ ಕೊಡಬೇಕಾದರೆ ನಮ್ಮ ಮೇಲಾಧಿಕಾರಿಯ ಅನುಮತಿ ಪಡೆದುಕೊಂಡು ಕೊಡಬೇಕು ಎಂದರೆ ನಿಜ. ನಾನು ಹಾಜರುಪಡಿಸಿದ ಎಕ್ಸರೆಗಳು ಅರ್ಜಿದಾರರಿಗೆ ಸಂಬಂದಪಟ್ಟವುಗಳಲ್ಲ ಎಂದರೆ ಸರಿಯಲ್ಲ.

ನಿ ಆರ್ -3 ಎಕ್ಸರೆಗಳಲ್ಲಿ ಒಂದು ಎಕ್ಸರೆಯಲ್ಲಿ ಐ ಪಿ ನಂಬರನ್ನು ಸ್ಕ್ರಾಚ್ ಮಾಡಲಾಗಿದ್ದು ಯಾವಾಗ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ. ಎಕ್ಸರೆ ಜೊತೆ ಕ್ಷ ಕಿರಣ ತಜ್ಞರು ನೀಡಿದ ವರದಿಯನ್ನು ಹಾಜರುಪಡಿಸಿಲ್ಲ. ಕ್ಷ ಕಿರಣವನ್ನು ತೆಗೆದ ಕೂಡಲೇ ಆ ವರದಿಯನ್ನು ಅವರು ಕೊಡುತ್ತಾರೆ ಎಂದರೆ ನಿಜ. ಅರ್ಜಿದಾರರಿಗೆ ಸಾಂಪ್ರದಾಯಿಕ ಚಿಕಿತ್ಸೆಯನ್ನು ನಾವೇ ಕೊಟ್ಟಿರುತ್ತೇವೆ. ಅರ್ಜಿದಾರರು ನಮ್ಮ ಆಸ್ಪತ್ರೆಯಲ್ಲಿ 4 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದರು. ನಮ್ಮ ಆಸ್ಪತ್ರೆಯಲ್ಲಿ ಹೊರರೋಗಿ ಹಾಗೂ ಒಳರೋಗಿಗಳ ಬಗ್ಗೆ ರಿಜಿಸ್ಟರ್ ಗಳ ನ್ನು ಆಸ್ಪತ್ರೆಯಲ್ಲಿ ನಿರ್ವಹಣೆ ಮಾಡಿರುತ್ತೇವೆ. ಒಳರೋಗಿಯಾಗಿ ಚಿಕಿತ್ಸೆ ಪಡೆದರೆ ಒಳರೋಗಿಯ ರಿಜಿಸ್ಟರ್ ನಲ್ಲಿ ನಮೂದು ಮಾಡಿಕೊಳ್ಳುತ್ತೇವೆ. ಅರ್ಜಿದಾರರಿಗೆ ಎಕ್ಸರೆ ಸಂಬಂದಪಟ್ಟವುಗಳು ಅಲ್ಲ ಎಂದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಆಸ್ಪತ್ರೆಯಲ್ಲಿ ಗಾಯಕ್ಕೆ ಸಂಬಂಪಟ್ಟಂತ ಆಯಾ ಸೆಕ್ಷನ್ ಸಂಬಂದಿಸಿದಂತೆ ಆಯಾ ರೋಗಿಗಳನ್ನು ಕಳುಹಿಸುತ್ತೇವೆ ಎಂದರೆ ನಿಜ. ಯಾವ ರೋಗಿಯನ್ನು ಯಾವ ವಿಭಾಗಕ್ಕೆ ಕಳುಹಿಸುತ್ತೇವೆ ಆ ವೈದ್ಯರೇ ಚಿಕಿತ್ಸೆ ಕೊಡಬೇಕು ಎಂದರೆ ಸರಿ. ಒಳರೋಗಿಯಾಗಿ ದಾಖಲಾದರೆ ಅವರಿಗೆ ಪ್ರತ್ಯೇಕ ವೈದ್ಯರು ಚಿಕಿತ್ಸೆ ನೀಡುತ್ತಾರೆ, ಸದರಿ ವೈದ್ಯರೇ ಚಿಕಿತ್ಸೆ ಕೊಡುತ್ತಾರೆ ಎಂದರೆ ಸರಿ. ಸದರಿ ಮೂಳೆ ತಜ್ಞ ವೈದ್ಯರು ಅವರೇ ಒಳರೋಗಿಗಳಿಗೆ ಚಿಕಿತ್ಸೆ ಕೊಡುತ್ತಾರೆ ಎಂದರೆ ಸರಿ. ಬೇರೆ ವೈದ್ಯರು ಅವರಿಗೆ ಚಿಕಿತ್ಸೆ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್ ವಿ ಎಮ್ ವಕೀಲರಿಂದಃ</u>**

ಅಪಘಾತದ ನಂತರ ಅರ್ಜಿದಾರರು ಪ್ರಥಮವಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದು ನಾವೇ

ಅವರಿಗೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಅರ್ಜಿದಾರರಿಗೆ ಬಲಭುಜದ ಮೂಳೆ ಮುರಿದಿರುತ್ತದೆ. ಬಲ ಮಂಡಿಯ ಚಿಪ್ಪಿಗೆ ಸಾಂಪ್ರದಾಯಿಕ ಚಿಕಿತ್ಸೆ ಕೊಟ್ಟಿರುತ್ತೇವೆ. ಚಿಕಿತ್ಸೆ ಕೊಡುವಾಗ ಎಕ್ಸರೆ ತೆಗೆದು ಫೈಲ್ ನಲ್ಲಿ ಹಾಕಿರುತ್ತೇವೆ ಎಂದರೆ ಸರಿ. ಒಂದು ಎಕ್ಸರೆಯಲ್ಲಿ ಅರ್ಜಿದಾರರ ಹೆಸರು, ದಿನಾಂಕ , ಒಪಿ ನಂಬರು ಇರುತ್ತದೆ ಎಂದರೆ ಸರಿ. 2021 ಕ್ಕಿಂತ ಮುಂಚೆ ಅಪಘಾತಕ್ಕೆ ಸಂಬಂದಪಟ್ಟಂತೆ ಗಾಯಾಳು ಬಂದಾಗ ಎಕ್ಸರೆ ತೆಗೆದು ಅವರ ಕೈಯಲ್ಲಿ ಕೊಡುತ್ತಿದ್ದರು. ಆಗ ಡಿಜಿಟಲ್ ಎಕ್ಸರೆಯ ವ್ಯವಸ್ಥೆ ನಮ್ಮ ಆಸ್ಪತ್ರೆಯಲ್ಲಿ ಇರಲಿಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.